**ದಿಃ 17-04-2025 ರಂದು ಪಿರ್ಯಾದಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಕೆ ಎಸ್ ಜಿ ಆರೋಪಿ ಪರ ವಕೀಲರಿಂದಃ**

ಹತ್ತು ಲಕ್ಷದ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ಸಹಿ ಮಾತ್ರ ಮಾಡಿದ್ದ ನಿಪಿ 1 ರ ಚೆಕ್ಕನ್ನು ದೇವರಾಜ್ ರವರಿಗೆ ನೀಡಿದ್ದ ಎಂದರೆ ಸರಿಯಲ್ಲ. ಕ್ರಯ ಪತ್ರ ಬರೆದುಕೊಡುವ ದಿನ ಆರೋಪಿ, ಆರೋಪಿಯ ತಂದೆ ತಾಯಿ ಮತ್ತು ಅವರ ಅಕ್ಕರವರಿಗೆ ಮೊದಲ ಬಾರಿಗೆ ನಾನೇ ಕ್ರಯ ಪತ್ರ ಬರೆಯಿಸಿಕೊಳ್ಳುತ್ತಿರುವ ವಿಷಯ ಗೊತ್ತಾಗಿತ್ತು ಎಂದರೆ ಸರಿಯಲ್ಲ. 35 ತಿಂಗಳುಗಳ ಒಳಗೆ ಕ್ರಯ ಪತ್ರ ಬರೆದುಕೊಡಬೇಕು ಎಂದು ನನ್ನ ಮತುತ ಆರೋಪಿಯ ಮಧ್ಯೆ ವಾಗ್ದಾನ ಆಗಿದ್ದು ಸದರಿ ಅವಧಿಯ ಒಳಗೆ ನಾನು ದೇವರಾಜ್ ರವರಿಂದ ನಿಪಿ 1 ರ ಚೆಕ್ಕನ್ನು ಪಡೆದು ಅದನ್ನು ನಾನೇ ಬರೆದುಕೊಂಡು ಪ್ರಸ್ತುತ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣ ದಾಖಲಿಸಿದ ನಂತರ ಹೊಳೆ ಹೊನ್ನೂರು ಪೊಲೀಸರು ಈ ಪ್ರಕರಣದ ಸಮನ್ಸ್ ಜಾರಿ ಮಾಡಲು ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆಯಿಸಿದ್ದು ಆ ಕಾಲಕ್ಕೆ ನಾನು ಸಹ ಪೊಲೀಸ್ ಠಾಣೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ 16.03.2024 ರ ಒಪ್ಪಂದ ಪತ್ರವನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ಒಪ್ಪಂದ ಪತ್ರದಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಕಾರಣ ವಿನಂತಿಯ ಮೇರೆಗೆ ಸದರಿ ಒಪ್ಪಂದ ಪತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕ 20.11.2021 ರ ನೋಂದಾಯಿತ ಶುದ್ದ ಕ್ರಯದ ವಾಗ್ದಾನ ಕರಾರು ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ದಾಖಲಿಯಲ್ಲಿಯ ತನ್ನ ಸಹಿ ನೋಡಿ ಗುರುತಿಸಿದ್ದು ಕಾರಣ ವಿನಂತಿಯ ಮೇರೆಗೆ ಸದರಿ ಜೆರಾಕ್ಸ್ ಪ್ರತಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕ 22.07.2024 ರ ನೋಂದಾಯಿತ ಕ್ರಯ ಕರಾರು ರದ್ದತಿ ಪತ್ರ ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ದಾಖಲೆಯಲ್ಲಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಕಾರಣ ವಿನಂತಿಯ ಮೇರೆಗೆ ಸದರಿ ನೋಂದಾಯಿತ ದಾಖಲೆಯನ್ನು ನಿಡಿ 3 ಎಂದು ಗುರುತಿಸಲಾಯಿತು. ನಿಡಿ 3 ರ ದಾಖಲೆ ಬರೆದುಕೊಟ್ಟ ನಂತರ ದೇವರಾಜ್ ರವರು ನಿಪಿ 1 ರ ಚೆಕ್ಕನ್ನು ನನ್ನಿಂದ ಪಡೆದು ಆರೋಪಿಗೆ ಮರಳಿಸುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆದಾಗ್ಯೂ ಸಹ ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸದರಿ ಪ್ರಕರಣವನ್ನು ಹಿಂಪಡೆಯದೆ ಮುಂದುವರೆಸುತ್ತಿದ್ದೇನೆ ಎಂದರೆ ಸರಿಯಲ್ಲ. 2022 ರಲ್ಲಿ ನನ್ನ ಮತ್ತು ಆರೋಪಿಯ ಮಧ್ಯೆ ಹಸಿ ಅಡಿಕೆ ನೀಡಿ ಒಣ ಅಡಿಕೆ

ಪಡೆಯುವ ಸಂಬಂದ, ಒಂದು ಒಪ್ಪಂದ ಪತ್ರ ಆಗಿದ್ದು ಆ ಕಾಲಕ್ಕೆ ನಾನು, ಆರೋಪಿ ಮತ್ತು ಆರೋಪಿಯ ತಂದೆ ತಾಯಿ ಮತ್ತು ಅಕ್ಕ, ಆರೋಪಿಯ ಸಂಬಂಧಿ ಇದ್ದರು. ನನ್ನ ಪರವಾಗಿ ನಾನೊಬ್ಬನೇ ಹಾಜರಿದ್ದೆ. ಸದರಿ ಒಪ್ಪಂದ ಪತ್ರಕ್ಕೆ ಆರೋಪಿಯ ಸಂಬಂಧಿ ಸಾಕ್ಷಿದಾರ ಎಂದು ಸಹಿ ಮಾಡಿದ್ದು ಅವರ ಹೆಸರು ಗೊತ್ತಿಲ್ಲ ಬದಲಾಗಿ ಮುಖ ಪರಿಚಯ ಇದೆ.

2023 ಕ್ಕೂ ಮುಂಚೆ ನಾನು ಬಸವಲಿಂಗಪ್ಪರವರ ಮೂಲಕ ರಂಗಸ್ವಾಮಿರವರಿಗೆ ನನ್ನ ಅಡಿಕೆ ಬೆಳೆಯನ್ನು ಖೇಣಿಗಾಗಿ ನೀಡುತ್ತಿದ್ದೆ. ನಾನು ಚನ್ನಗಿರಿಯ ತುಮಕೋಸಿನಲ್ಲಿ ಖಾತೆ ಮತ್ತು ಷೇರು ಹೊಂದಿದ್ದೇನೆ. ಸದರಿ ಖಾತಾ ಪುಸ್ತಕ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮತ್ತು ಆರೋಪಿ ಮಧ್ಯೆ ಆದ ಖೇಣಿ ವ್ಯವಹಾರದಂತೆ ಒಂದು ಕ್ವಿಂಟಾಲ್ ಹಸಿ ಅಡಿಕೆ ಬೆಳೆಗೆ ಆರೋಪಿ ನನಗೆ 13 ಕೆ ಜಿ ಒಣ ಅಡಿಕೆಯನ್ನು ನೀಡುವ ಮಾತುಕತೆಯಾಗಿದ್ದು ಮತ್ತು ಸದರಿ 13 ಕೆ ಜಿ ಅಡಿಕೆ ಅಥವಾ ಅದರ ಬದಲಾಗಿ ಅದರ ಹಣವನ್ನು ನೀಡುವ ಕುರಿತು ಮಾತುಕತೆಯಾಗಿತ್ತು. ಆರೋಪಿ ನನಗೆ 49 ಕ್ವಿಂಟಾಲ್ 84 ಕೆ ಜಿ ಅಡಿಕೆ ನನಗೆ ನೀಡಬೇಕಾಗಿದ್ದ ಬಗ್ಗೆ ಒಪ್ಪಂದ ಪತ್ರದಲ್ಲಿ ಬರೆಯಿಸಿಲ್ಲ. ಹಸಿ ಅಡಿಕೆಯನ್ನು ಕೊಯ್ಲು ಮಾಡಿದ ನಂತರ ಅದನ್ನು ತೂಕ ಮಾಡಿಸಲಾಗುತ್ತದೆ ಎಂದರೆ ಸರಿ. ವರ್ಷದಲ್ಲಿ 3-4 ಬಾರಿ ಅಡಿಕೆ ಕೊಯ್ಲು ಮಾಡಿಸುತ್ತಾರೆ ಎಂದರೆ ಸರಿ. ಹಸಿ ಅಡಿಕೆ ಕೊಯ್ಲು ಮಾಡಿದ ನಂತರ ಅದನ್ನು ತೂಕ ಮಾಡಿಸಿ ಆ ಬಗ್ಗೆ ರಸೀದಿ ಇರುತ್ತದೆ ಎಂದರೆ ಸರಿ. ಹಸಿ ಅಡಿಕೆ ತೂಕ ಮಾಡಿಸಿದ ನಂತರ ಸದರಿ ತೂಕದ ರಸೀದಿಗೆ ನಾನು ಮತ್ತು ಆರೋಪಿ ಸಹಿ ಮಾಡಿದ್ದು ನಂತರ ಸದರಿ ರಸೀದಿಯನ್ನು ಆರೋಪಿಗೆ ನೀಡಿದ್ದೆ. ಹಸಿ ಅಡಿಕೆ ತೂಕ ಮಾಡಿ ನೀಡಿದ್ದ ದಾಖಲೆ ನನ್ನ ಬಳಿ ಇಲ್ಲ ಬದಲಾಗಿ ಖೇಣಿದಾರ ಆರೋಪಿ ಬಳಿ ಇದೆ.

ನನ್ನ ಮತ್ತು ಆರೋಪಿಯ ಮಧ್ಯೆ ಯಾವ ಕಾಲಕ್ಕೂ ಅಡಿಕೆ ಖೇಣಿ ವ್ಯವಹಾರ ಆಗಿಲ್ಲ ಬದಲಾಗಿ ಜಮೀನು ಕ್ರಯದ ವಿಚಾರವಾಗಿ ವ್ಯವಹಾರ ಆಗಿದ್ದು ಮತ್ತು ದೇವರಾಜ್ ರವರಿಂದ ನಿಪಿ 1 ರ ಚೆಕ್ ಪಡೆದು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. 05.01.2023 ರಂದು ಆರೋಪಿ ನಮ್ಮ ಮನೆಗೆ ಬಂದು ನನಗೆ ರೂ 6,92,640/- ಹಣ ಪಾವತಿಸಿ ನಿಪಿ 1 ರ ಚೆಕ್ಕನ್ನು ನೀಡಿದ್ದ. ಅದೇ ದಿನ ಆರೋಪಿ ನಿಪಿ 1 ಕ್ಕೆ ಸಹಿ ಮಾಡಿ ದಿನಾಂಕ ನಮೂದಿಸಿ ನೀಡಿದ್ದ. ನಿಪಿ 1 ರ ಚೆಕ್ಕಿನಲ್ಲಿ 10.04.2023 ರ ದಿನಾಂಕ ನಮೂದಿಸಿ ನೀಡಿದ್ದ. ಉಳಿದ ರೂ 16 ಲಕ್ಷದ ಹಣದ

ಕುರಿತು ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಬರವಣಿಗೆ ಆಗಿಲ್ಲ ಬದಲಾಗಿ ಆರೋಪಿ ನಿಪಿ 1 ರ ಚೆಕ್ಕನ್ನು ನೀಡಿದ್ದಾರೆ. ನನ್ನ ಸಮಕ್ಷಮ ನಿಪಿ 1 ರ ಚೆಕ್ಕನ್ನು ಬರೆದಿಲ್ಲ. ನಿಪಿ 1 ರ ಚೆಕ್ಕನ್ನು ಆರೋಪಿ ಬರೆದುಕೊಂಡು ಬಂದು ನನಗೆ ನೀಡಿದ್ದಾರೆ.

ನಿಪಿ 1 ನ್ನು ನಗದೀಕರಣಕ್ಕಾಗಿ ಸಲ್ಲಿಸಲು ಬ್ಯಾಂಕಿಗೆ ನಾನು ಮತ್ತು ನನ್ನ ಗುಮಾಸ್ತ ಹೋಗಿರಬಹುದು. ಪ್ರಕರಣಕ್ಕೂ ಮತ್ತು ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.